<u>ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ</u>

<u>ಸಿ.ಸಿ. ನಂ. **1379/2024** ಸಿ. ಡಬ್ಲ್ಯೂ: **1** ಪಿ ಡಬ್ಲ್ಯೂ ಃ **1**</u>

ಸಾಕ್ಷಿಯ ಹೆಸರು ಃ ರತ್ನವ್ವ ಚಂದರಗಿ

ಗಂಡನ ಹೆಸರು ಃ ಕಲ್ಲಪ್ಪ.

ವಯಸ್ಸು ಃ 35 ವರ್ಷ

ಉದ್ಯೋಗ ಃ ಕೂಲಿ.

ವಾಸಸ್ಥಳ ಃ ಗುಡಿಕಟ್ಟಿ, ಬೈಲಹೊಂಗಲ ತಾಲೂಕ.

ದಿನಾಂಕಃ 21/01/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಮುಖ್ಯ ವಿಚಾರಣೆಃ ಸಸಅ ರವರಿಂದ</u>

1. ಚಾಸಾ 6 ನನ್ನ ಅತ್ತೆ. ಚಾಸಾ 7 ನನಗೆ ಪರಿಚಯವಿಲ್ಲ. ಚಾಸಾ 8 ಮತ್ತು 10 ನನ್ನ ಅತ್ತೆಯರು. ಚಾಸಾ 9 ದೊಡ್ಡಮ್ಮ. ಚಾಸಾ 11 ನನ್ನ ಚಿಕ್ಕಮ್ಮ. ಆರೋಪಿಯ ಪರಿಚಯವಿಲ್ಲ. ಒಂದುವರೆ ವರ್ಷಗಳ ಹಿಂದೆ ನಾನು, ಚಾಸಾ 6 ಮತ್ತು ಚಾಸಾ 9 ರಿಂದ 11 ಅವರೊಂದಿಗೆ ಉಕ್ಕಡಗಾತ್ರಿ ಜಾತ್ರೆಗೆ ಕೆ ಎಸ್ ಆರ್ ಟಿ ಸಿ ಬಸ್ಸನಲ್ಲಿ ಧಾರವಾಡದಿಂದ ಬೆಳಿಗ್ಗೆ 06-30 ಕ್ಕೆ ಬಿಟ್ಟು ಸದರಿ ಬಸ್ಸ್ ವರೂರುಗೆ ಬಂದಾಗ ಬೆಳಿಗ್ಗೆ 10-30 ಆಗಿತ್ತು. ಯಾತ್ರಿ ನಿವಾಸದ ಬಳಿ ರಸ್ತೆ ಹಂಪ್ ಇದ್ದಿದ್ದರಿಂದ ಬಸ್ ಚಾಲಕ ಬಸ್ಸನ್ನು ವೇಗವಾಗಿ ಚಲಾಯಿಸಿದ್ದರಿಂದ ನಾನು ಮತ್ತು ಚಾಸಾ 6 ಬಸ್ಸನ ಒಳಗಡೆ ಆಯಾ ತಪ್ಪಿ ಕೆಳಗೆ ಬಿದ್ದೇವು. ಆಗ ಚಾಸಾ 6 ಅವರ ಸೊಂಟಕ್ಕೆ ಪೆಟ್ಟಾಗಿದ್ದು, ನಂತರ ಬಸ್ಸ್ ಚಾಲಕ ರೂ. 100/- ಕೊಟ್ಟು ಆಟೋದಲ್ಲಿ ಶಿಗ್ಗಾಂವ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುವಂತೆ ನಮ್ಮನ್ನು ಕಳುಹಿಸಿದರು. ಸದರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಚಾಸಾ 6 ಅವರನ್ನು ಕಿಮ್ಸ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ತಂದು ದಾಖಲು ಪಡಿಸಿದೇವು. ನನ್ನ ಹೊಟ್ಟೆಗೆ ಪೆಟ್ಟಾಗಿದ್ದು, ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲಿಲ್ಲ. ಬಸ್ಸ್ ನಂಬರ ನನಗೆ ಗೊತ್ತಿಲ್ಲ. ಚಾಲಕನ ಹೆಸರು ಸಹ ಗೊತ್ತಿಲ್ಲ. ದೂರನ್ನು ಪೋಲೀಸರಿಗೆ ಶಿಗ್ಗಾಂವ್ ಪೋಲೀಸ್ ಠಾಣೆಗೆ ಕೊಡಲು ಹೋಗಿದ್ದಾಗ ಅಪಘಾತದ ಸ್ಥಳ ಕುಂದಗೋಳ ಪೋಲೀಸ್ ಠಾಣಾ ವ್ಯಾಪ್ತಿಗೆ ಬರುವ ಕಾರಣ ದೂರನ್ನು ಪಡೆಯದೇ ಕುಂದಗೋಳಕ್ಕೆ ಕಳುಹಿಸಿದ್ದು, ನಂತರ ನಾನು ಕುಂದಗೋಳ ಪೋಲೀಸ್ ಠಾಣೆಗೆ ಬಂದು ದೂರನ್ನು ಕೊಟ್ಟಿದ್ದೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು, ನಿಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು ಗುರುತಿಸಲಾಯಿತು. ಸಾಕ್ಷಿ

ಮಹಜರನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 2 ಎ ಎಂದು ಗುರುತಿಸಲಾಯಿತು. ನಿಪಿ. 2 ಕ್ಕೆ ಅಪಘಾತವಾದ ನಾಲ್ಕು ದಿನಗಳ ನಂತರ ಯಾತ್ರಿ ಹೋಟೇಲ್ ಬಳಿ ಸಹಿ ಮಾಡಿದ್ದೇನೆ. ಸದರಿ ಸಹಿ ಮಾಡುವಾಗ ನನ್ನ ಮಾವ ಮತ್ತು ಪೋಲೀಸರು ಇದ್ದರು. ಪಂಚನಾಮೆ ಮಾಡುವಾಗ ಮಃ 03-30 ರಿಂದ 04-00 ಗಂಟೆ ಆಗಿತ್ತು. ಭಾವ ಚಿತ್ರದಲ್ಲಿ ನಾನು ಇದ್ದು, ಸದರಿ ಭಾವ ಚಿತ್ರವನ್ನು ಪಂಚನಾಮೆಯ ಕಾಲಕ್ಕೆ ತೆಗೆದಿರುತ್ತಾರೆ. ಭಾವ ಚಿತ್ರವನ್ನು ನಿಪಿ. 3 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೀರಾ ಎಂದರೆ ಇಲ್ಲ.

( ಮಾನ್ಯ ಸಸಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅನುಮತಿ ಕೋರಿದಂತೆ ನೀಡಲಾಯಿತು).

ಪಾಟೀ ಸವಾಲು**:** ಮಾನ್ಯ ಸಸಅ ರವರಿಂದ

2. ದಿಃ 22-05-2024 ಮುಂಜಾನೆ 10-00 ಗಂಟೆಗೆ ಅಪಘಾತ ಆಗಿದೆ ಎಂದರೆ ಸರಿ. ಕೆ ಎಸ್ ಆರ್ ಟಿ ಸಿ ಬಸ್ಸ್ ನಂಬರ ಕೆಎ-25-ಎಫ್-3391 ಮತ್ತು ಅದರ ಚಾಲಕನ ಹೆಸರು ರಾಮಪ್ಪ ತಂದೆ ಲಕ್ಷ್ಮಪ್ಪ ಹೊನಕುಪ್ಪಿ ಎಂದರೆ ಸಾಕ್ಷಿ ಬಸ್ಸ್ ನಂಬರ ಸರಿ ಇದೆ. ಆದರೆ ಆರೋಪಿ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ದಿಃ 24/05/2024 ರಂದು ಮಃ 04-30 ರಿಂದ 05-40 ರ ವರೆಗೆ ನಾನು ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು 3 ರ ಸಮಕ್ಷಮದಲ್ಲಿ ನಿಪಿ. 2 ರಂತೆ ಪಂಚನಾಮೆ ಮಾಡಿದ್ದಾರೆ ಎಂದರೆ ಸರಿ.

ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಮ್ ಬಿ ಬಿ ವಕೀಲರಿಂದ ಃ

**3.** ದೂರನ್ನು ಶಿಗ್ಗಾಂವ್ ಪೋಲೀಸರು ಬರೆದಿರುತ್ತಾರೆ. ಆದರೆ ಅವರ ಹೆಸರು ಗೊತ್ತಿಲ್ಲ. ನಿಪಿ. 1 ರಲ್ಲಿ ಏನು ಬರೆದಿದೆ ಎಂದು ನಾನು ಸ್ವಂತಕ್ಕೆ ಓದಿ ತಿಳಿದುಕೊಂಡಿಲ್ಲ ಎಂದರೆ ಸರಿ. ಪೋಲೀಸರು ಸಹಿ ಮಾಡಲು ಹೇಳಿದ್ದರಿಂದ ನಿಪಿ. 1 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ. ಶಿಗ್ಗಾಂವ್ ಪೋಲೀಸ್ ಠಾಣೆಗೆ ಹೋದ ದಿನಾಂಕ ನನಗೆ ನೆನಪಿಲ್ಲ. ಅದೇ ದಿನ ಕುಂದಗೋಳ ಪೋಲೀಸ್ ಠಾಣೆಗೆ ಬಂದು ನೀವು ದೂರು ಕೊಟ್ಟಿದ್ದೀರಾ ಎಂದರೆ ಇಲ್ಲ. ನಾಲ್ಕು ದಿನಗಳ ನಂತರ ದೂರು ಕೊಟ್ಟಿದ್ದೇನೆ. ಸದರಿ ನಾಲ್ಕು ದಿನಗಳ ವಿಳಂಬದಲ್ಲಿ ಚಾಲಕ ಮತ್ತು ನಿರ್ವಾಹಕ ಯಾರು ಇದ್ದರು ಮತ್ತು ಅವರುಗಳ ಹೆಸರುಗಳು ಏನು ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ಡಿಪೋ ಮ್ಯಾನೇಜರಗೆ ದೂರು ಕೊಟ್ಟಿದ್ದೀರಾ ಎಂದರೆ ಇಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಸರಿ. ಸ್ಥಳದ ಚಕಬಂದಿ ಪೂರ್ವಕ್ಕೆ ಶಿಗ್ಗಾಂವ್ ರಸ್ತೆ, ಪಶ್ಚಿಮಕ್ಕೆ, ಉತ್ತರಕ್ಕೆ ಮತ್ತು

ದಕ್ಷಿಣಕ್ಕೆ ಏನಿದೆ ಎಂದು ನನಗೆ ಗೊತ್ತಿಲ್ಲ. ಬಸ್ಸ್ ಚಾಲಕ ವೇಗವಾಗಿ ರಸ್ತೆ ಹಂಪ್ ಮೇಲೆ ಬಸ್ಸನ್ನು ಚಲಾಯಿಸಿದ್ದರಿಂದ ಚಾಸಾ 6 ಪುಟಿದು ಬಿದ್ದು ಸೊಂಟಕ್ಕೆ ಗಾಯ ಪಡಿಸಿಕೊಂಡಿದ್ದಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪುನಃ-ಬೆಂಗಳೂರು ರಸ್ತೆಯಲ್ಲಿ ಸಾಕಷ್ಟು ಬಸ್ಸುಗಳು ಓಡಾಡುತ್ತವೆ ಎಂದರೆ ಸರಿ. ಅದೇ ಬಸ್ಸ್ ನಲ್ಲಿ ಚಾಸಾ 6 ಅವರಿಗೆ ಗಾಯಗಳಾಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಕೋರಿ ಚಾಸಾ 6 ಅರ್ಜಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ 6 ಅವರಿಗೆ 60 ವರ್ಷ ವಯಸ್ಸು. ಚಾಸಾ 6 ಜಾತ್ರೆಯಲ್ಲಿ ಸ್ವತಃ ಜಾಗಿ ಬಿದ್ದು ಗಾಯಪಡಿಸಿಕೊಂಡು ಪರಿಹಾರ ಪಡೆಯುವ ಸಂಬಂಧ ಬಸ್ಸನ ಟಿಕೆಟ್ ನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸ್ಸ್ ಚಾಲಕ ರೂ. 100/- ಕೊಟ್ಟು ಚಿಕಿತ್ಸೆ ಪಡೆಯುವಂತೆ ಆಟೋದಲ್ಲಿ ಕಳುಹಿಸಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಸ್ಸ್ ಸವದತ್ತಿ ಡಿಪೋಗೆ ಸೇರಿದ್ದು, ಬೆಂಗಳೂರಿಗೆ ಹೊರಟಿತ್ತು. ಸದರಿ ಬಸ್ಸ್ ನ ನಂಬರ ನನಗೆ ಗೊತ್ತಿಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.